

ಸ್ಮಾರ್ಟ್‌ಹೋಮ್; ಈಗಿನ ಕಾಲದ ಟ್ರೆಂಡಿಂಗ್ ಲೈಫ್‌ಸ್ಟೈಲ್‌ಗಳಲ್ಲೊಂದು. ಇದು ಬಿಡುವಿಲ್ಲದ ಜೀವನಕ್ಕೆ ಹಿಂದೆಂದಿಗಿಂತಲೂ ಔಚಿತ್ಯವೂ ಹೌದು. ಜಗತ್ತಿನ ವಿದ್ಯಮಾನಗಳನ್ನೆಲ್ಲ ಮನೆಯಲ್ಲಿಯೇ ಕೂತು ತಿಳಿಯುವ ನಮಗೆ, ಮನೆ ನಿರ್ವಹಣೆಯನ್ನೂ ಬೆರಳತುದಿಗೆ ತರಲು ಇದು ಸಕಾಲ.

■ **ಶಶಿಕುಮಾರ್ ಸಿ.**

# ಸ್ಮಾರ್ಟ್‌ಹೋಮ್

## ಬೆರಳ ತುದಿಯಲ್ಲೇ ಮನೆ ನಿರ್ವಹಣೆ

ಸ್ಮಾರ್ಟ್‌ಫೋನ್‌ಗಳು ಜೇಬು ಸೇರಿದ ನಂತರ ಅದರ ಜೊತೆಗಿನ ನಂಟು ಗಾಢವಾಗಿ ಬೆಸೆದುಕೊಳ್ಳುತ್ತಲೇ ಇದೆ. ಆ ನಂಟಿನಲ್ಲಿ 'ಸ್ಮಾರ್ಟ್‌ಹೋಮ್' ಪರಿಕಲ್ಪನೆಯೂ ಸೇರಿದೆ.

ನಗರ ಪ್ರದೇಶಗಳ ಮನೆಗಳಲ್ಲಿ, ಅದರಲ್ಲೂ ಅಪಾರ್ಟ್‌ಮೆಂಟ್ ಫ್ಲಾಟ್‌ಗಳಲ್ಲಿ 'ಸ್ಮಾರ್ಟ್‌ಹೋಮ್'ಗೆ ಇಂಬುಕೊಡುವಂತಹ, ಮನೆ ನಿರ್ವಹಣೆಯನ್ನು ಸಲೀಸಾಗಿಸುವಂಥ ಹಲವು ಸ್ಮಾರ್ಟ್ ಸಾಧನಗಳು ಕಾರ್ಯನಿರ್ವಹಿಸುತ್ತಿವೆ.

### ಮನೆ ಕಾವಲಿಗೆ ಸ್ಮಾರ್ಟ್ ಕ್ಯಾಮೆರಾ

ಮನೆ ಮುಂದಿನ ಗೇಟ್ ಬಳಿ, ಸುತ್ತಮುತ್ತ ಹಾಗೂ ಮನೆಯೊಳಗೆ ಸ್ಮಾರ್ಟ್ ಆಗಿ ಕಾರ್ಯನಿರ್ವಹಿಸುವ 4ಕೆ ಅಥವಾ ಅದಕ್ಕಿಂತಲೂ ಹೆಚ್ಚಿನ ಸಾಮರ್ಥ್ಯದ ದೃಶ್ಯ ಒದಗಿಸುವ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಿಕೊಳ್ಳುವುದು ಸುರಕ್ಷತೆಯ ದೃಷ್ಟಿಯಿಂದ ಒಳಿತು. ಮೊಬೈಲ್ ನಿಯಂತ್ರಣದಲ್ಲಿರುವ ಹಾಗೂ ಇಂಟರ್‌ನೆಟ್‌ನೊಂದಿಗೆ ಕಾರ್ಯನಿರ್ವಹಿಸುವ ಕ್ಯಾಮೆರಾಗಳಿಗೆ ಆದ್ಯತೆ ನೀಡಿ. ದೂರದೂರುಗಳಿಗೆ, ಪ್ರವಾಸಕ್ಕೆ ಹೋದಾಗ, ಮನೆಯಲ್ಲಿ ಯಾರೂ ಇಲ್ಲದಾಗ, ಎಲ್ಲೋ ಕುಳಿತು ಮನೆಯಲ್ಲಿ ಏನಾಗುತ್ತಿದೆ ಎಂಬುದನ್ನು ಕ್ಯಾಮೆರಾಗಳ ಮೂಲಕ ಸ್ಮಾರ್ಟ್‌ಫೋನ್‌ನಲ್ಲೇ ನೋಡಬಹುದು.

ಕ್ಯಾಮೆರಾಗಳು ಕೃತಕ ಬುದ್ಧಿಮತ್ತೆ ತಂತ್ರಾಂಶವನ್ನು ಒಳಗೊಂಡಿದ್ದರೆ ಇನ್ನೂ ಉತ್ತಮ. ಯಾಕೆಂದರೆ ಅವು ಮನೆಯೊಳಗೆ ಬರುವವರನ್ನೇ ಕೇಂದ್ರೀಕೃತವಾಗಿರಿಸಿಕೊಂಡು ಕ್ಯಾಪ್ಚರ್ ಮಾಡುತ್ತವೆ. ಈ ಕ್ಯಾಮೆರಾ ಸಿಸ್ಟಂ ಅನ್ನು ಮನೆಯೊಳಗೆ ಇಟ್ಟುಕೊಂಡಲ್ಲಿ, ಹೊರಗೆ ಯಾರು ಬಂದಿದ್ದಾರೆ ಅನ್ನೋದನ್ನು ಮನೆಯೊಳಗೆ ಕೂತು ನೋಡಿ ಅಪರಿಚಿತರು ಇದ್ದಲ್ಲಿ ಗೇಟ್ ತೆರೆಯದೇ ಅಪಾಯದಿಂದ ಪಾರಾಗಬಹುದು. ಶಾಲೆಗೆ ಹೋಗುವ ಮಕ್ಕಳು ಮನೆಗೆ ಬಂದಿದ್ದಾರೋ ಇಲ್ಲವೋ ಅನ್ನೋದನ್ನೂ ಎಲ್ಲೋ ಕೂತು ನೋಡಲು ಇವುಗಳಿಂದ ಸಾಧ್ಯ.

### ಸ್ಮಾರ್ಟ್ ಲಾಕರ್

ನಗರ ಪ್ರದೇಶಗಳಲ್ಲಿ ವಾಸಿಸುವ ಜನರು ಸುರಕ್ಷೆಗೆ ಆದ್ಯತೆ ನೀಡಲೇಬೇಕಾಗುತ್ತದೆ. ಕಳ್ಳರು, ನಾನಾ ರೀತಿಯ ವೇಷದಲ್ಲಿ ಮನೆ ಪ್ರವೇಶಿಸಿ ದುಷ್ಕೃತ್ಯಗಳನ್ನು ಎಸಗುವವರ ಸಂಖ್ಯೆ ನಗರ ಪ್ರದೇಶಗಳಲ್ಲಿ ಹೆಚ್ಚಾಗುತ್ತಿದೆ. ಹೀಗಾಗಿ, ಮನೆಗಳ ಗೇಟುಗಳಿಗೆ, ಬಾಗಿಲುಗಳಿಗೆ ಸ್ಮಾರ್ಟ್ ಲಾಕ್ ಬಳಸುವುದು ಉತ್ತಮ.



ಮನೆಗೆ ಯಾರು ಬಂದಿದ್ದಾರೆ ಅನ್ನೋದನ್ನು ಒಳಗೆ ಕೂತು ನೋಡುವ ವ್ಯವಸ್ಥೆಯನ್ನು ಕ್ಯಾಮೆರಾ ಹಾಗೂ ಡಿಸ್‌ಪ್ಲೇಯೊಂದಿಗೆ ಇಂಟಿಗ್ರೇಟ್ ಆಗಿರುವ ಸ್ಮಾರ್ಟ್ ಲಾಕರ್‌ಗಳು ಒಳಗೊಂಡಿರುತ್ತವೆ. ಗೇಟಿನ ಬಳಿ ಹಾಗೂ ಬಾಗಿಲ ಬಳಿಯ ಕ್ಯಾಮೆರಾಗಳ ಮೂಲಕ ಯಾರು ಬಂದಿದ್ದಾರೆ ಅಂತ ನೋಡಿ ಗೇಟು ಮತ್ತು ಬಾಗಿಲು ತೆರೆಯುವುದನ್ನು ನಿರ್ಧರಿಸಬಹುದು. ಈ ಸ್ಮಾರ್ಟ್ ಲಾಕರ್‌ಗಳು ಫೇಸ್ ರೆಕಗ್ನಿಷನ್, ಫಿಂಗರ್ ಪ್ರಿಂಟ್, ಆಕ್ಸೆಸ್ ಕಾರ್ಡ್ ಹಾಗೂ ಪಾಸ್‌ವರ್ಡ್ ಮೂಲಕ ತೆರೆಯುವ ಸೌಲಭ್ಯವನ್ನು ಒಳಗೊಂಡಿರುತ್ತವೆ. ಮನೆಯ ಸದಸ್ಯರ ಮುಖ ಚಹರೆಯಿಂದ ಹಾಗೂ ಫಿಂಗರ್ ಪ್ರಿಂಟ್‌ನಿಂದ ಸ್ಮಾರ್ಟ್ ಲಾಕರ್ ಓಪನ್ ಆಗುವ ಮತ್ತು ಕ್ಲೋಸ್ ಮಾಡುವ ಅವಕಾಶವಿದೆ. ಇವುಗಳಿಗೆ ಪಾಸ್‌ವರ್ಡ್ ಸೆಟ್ ಮಾಡಿ, ಮನೆಯ ಸದಸ್ಯರೊಂದಿಗೆ ಮಾತ್ರ ಹಂಚಿಕೊಳ್ಳಿ. ಆಕ್ಸೆಸ್ ಕಾರ್ಡನ್ನು ಡಿವೈಎಸ್‌ಗೆ ಟ್ಯಾಪ್ ಮಾಡಿದರೆ, ಡೋರ್ ತಾನಾಗಿಯೇ ಅನ್‌ಲಾಕ್ ಆಗುವಂತಹ ಸೌಲಭ್ಯವೂ ಇದ್ದು, ಸುರಕ್ಷತೆಯ ದೃಷ್ಟಿಯಿಂದ ಅವುಗಳನ್ನು ಬಳಸುವುದು ಒಳಿತು. ಇವುಗಳನ್ನು ಸ್ಮಾರ್ಟ್‌ಫೋನ್ ಮೂಲಕವೂ ನಿರ್ವಹಿಸಬಹುದು.

ಇವು ಮಾರುಕಟ್ಟೆಗೆ ಬಂದು ಬಹಳ ವರ್ಷಗಳಾಗಿವೆ. ಇದರಲ್ಲಿರುವ ಫೀಚರ್‌ಗಳು ಕಾಲಕಾಲಕ್ಕೆ ಅಪ್‌ಡೇಟ್ ಆಗುತ್ತಲೇ ಇದ್ದು, ಹೊಸದಾಗಿ ಕಟ್ಟುತ್ತಿರುವ ಮನೆಗಳಲ್ಲಿ ಅತ್ಯಂತ

